ಕಥೆ




## ಮಾಧವಿ ಎಸ್. ಭಂಡಾರಿ

ಕಲೆ: ರೂಪಶ್ರೀ ಕಲ್ಲಿಗನೂರು


# ಆಘಾತ



ಮೊನ್ನೆ ಬೆಳ್ಳಂಬೆಳಗ್ಗೆ ಮಕ್ಕಳಿಬ್ಬರೂ ಒಬ್ಬರ ಮೇಲೊಬ್ಬರು ಕೆಸರೆರಚಿಕೊಳ್ಳುವುದನ್ನು ಕೇಳಿ ಮನಸ್ಸು ತುಂಬಾ ಘಾಸಿಯಾಗಿತ್ತು. ಎಷ್ಟೊಂದು ಅನ್ಯೋನ್ಯವಾಗಿ ಬೆಳೆದ ಮಕ್ಕಳಿವರು. ಮುಂಜಾನೆ ಎದ್ದು ಬಂದಾಗ ಅಮ್ಮನ ಸೆರಗು ಹಿಡಿಯುವುದಕ್ಕೆ ಪೈಪೋಟಿ ನಡೆಸುತ್ತಿದ್ದವರು. ಅದಕ್ಕೇ ಬೆನ್ನ ಮೇಲಿಂದ ಸೆರಗು ತಂದು ಎಡ- ಬಲದಲ್ಲಿ ಇಬ್ಬರನ್ನೂ ಕುಳ್ಳಿರಿಸಿಕೊಂಡು, ಇಬ್ಬರಿಗೂ ಸೆರಗು ಸಿಗುವಂತೆ ಮಾಡುತ್ತಿದ್ದ ದಿನಗಳು ಇಂದಿಗೂ ಕಣ್ಣಿಗೆ ಕಟ್ಟಿದಂತೆ ಇವೆ. ವಯಸ್ಸು ಹೇಗೆ ಅವರ ಪಾಲಿಗೆ ಎಲ್ಲವನ್ನೂ ಮರೆಸಿಬಿಟ್ಟಿದೆ ಎಂಬುದೇ ಅರ್ಥವಾಗುತ್ತಿಲ್ಲ. ಏನೋ ಜೋಕ್ ಮಾಡುತ್ತಾ ಇಬ್ಬರ ಬಳಿಗೆ ಹೋದೆ. 'ಅಮ್ಮ ನೀನು ಸುಮ್ಮನಿರು. ನಿನಗಿದು ಅರ್ಥವಾಗುವುದಿಲ್ಲ' ಎಂದ ದೊಡ್ಡವ. ಸಣ್ಣವ ನನ್ನತ್ತ ನೋಡಿದವನು ಕಣ್ಣಲ್ಲಿ ಕಣ್ಣಿಡಲಾರದೆ, ಮುಖ ತಿರುಗಿಸಿದ. ಎಂಟು ದಿನಗಳ ಮಟ್ಟಿಗೆ ಒಬ್ಬ ಬೆಂಗಳೂರಿಂದ ಬಂದಿದ್ದರೆ, ಮತ್ತೊಬ್ಬ ನೊಯಿಡಾದಿಂದ ಬಂದಿದ್ದ.

'ಸಂದೀಪ, ಹೊಟ್ಟೆಯಲ್ಲೇನೋ ತಳಮಳ ಆಗ್ತಾ ಇದೆ. ತಲೆಯೊಳಗೆ ಹಲವು ಸೂಜಿಗಳಿಂದ ಚುಚ್ಚುತ್ತಿರುವ ಅನುಭವ. ಎಡಗಾಲು ಮೊದಲೇ ಸರಿಯಿಲ್ಲ' ಇಷ್ಟು ಹೇಳಿದ್ದು ನೆನಪಿದೆ. ಕುಳಿತಿದ್ದವಳು ಅಲ್ಲೇ ಸೋಫಾದಮೇಲೆ ಅಡ್ಡಬಿದ್ದೆನೆಂದು ಅನ್ನಿಸಿತಾದರೂ, ಏನಾಗುತ್ತಿದೆಯೆಂದು ತಿಳಿಯಲಿಲ್ಲ. ಪ್ರಜ್ಞೆ ಬಂದಿದ್ದು ಆಸ್ಪತ್ರೆಯಲ್ಲಿ. ಎಲ್ಲರೂ ಅತ್ತಿತ್ತ ಓಡುತ್ತಿರುವುದನ್ನು ನೋಡಿ ನನಗೇ ಆಶ್ಚರ್ಯ! ನಾನು ಎಲ್ಲವನ್ನೂ ಗಮನಿಸುತ್ತಿದ್ದೇನೆ. ಇಲ್ಲಿಯ ಎಲ್ಲ ಆಗುಹೋಗುಗಳು ನನಗೆ ಅರ್ಥವಾಗುತ್ತಿವೆ. ಆದರೂ ನಾನೇಕೆ ಮನೆಯಲ್ಲಿರದೆ, ಆಸ್ಪತ್ರೆಯಲ್ಲಿದ್ದೇನೆ. ಅದೂ ಆಸ್ಪತ್ರೆಯ ಸುಸಜ್ಜಿತವಾದ ಕೋಣೆಯೊಂದರಲ್ಲಿ!

ಮಕ್ಕಳೆಡೆಗೆ ನೋಡಿದೆ, 'ಸುಮ್ಮನಿರು, ಏನೂ ಮಾತಾಡಬೇಡ' ಎಂಬಂತೆ ಒಬ್ಬ ಅಲ್ಲಿಂದಲೇ ಸನ್ನೆ ಮಾಡಿದ. ಮತ್ತೊಬ್ಬ ಹೊರಗಿನಿಂದ ಆಗಷ್ಟೇ ಒಳಗೆ ಬರುತ್ತಿದ್ದ.

ಆ ಸ್ಕ್ಯಾನ್, ಈ ಸ್ಕ್ಯಾನ್ ಎಂದು ಗಾಲಿಕುರ್ಚಿಯಲ್ಲಿ ಕರೆದುಕೊಂಡು ಹೋದದ್ದೇ ಹೋದದ್ದು.